ಜಿಲ್ಲಾ ಪರಿಷತ್ತಿನ ಕೆಲವು ರಸ್ತೆಗಳನ್ನು ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವುದು

286-ಶ್ರೀ ಬಸವರಾಜ ರಾಯ ರೆಡ್ಡಿ (ಯಲಬುರ್ಗಿ): ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರವು ರಾಜ್ಯದಲ್ಲಿಯ ಜಿಲ್ಲಾ ಪರಿಷತ್ತಿನ ಕೆಲವು ರಸ್ತೆಗಳನ್ನು ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಏರಿಸುವುದೇ?*

ಆ) *ಹಾಗಿದ್ದಲ್ಲಿ 1992-93ನೇ ಸಾಲಿನಲ್ಲಿ ಎಷ್ಟು ಕಿ.ಮೀ. ಉದ್ದದ ಜಿಲ್ಲಾಪರಿಷತ್ತಿನ ರಸ್ತೆಗಳನ್ನು ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು.*

ಇ) *1992-93ನೇ ಸಾಲಿನಲ್ಲಿ ಈ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವುದಕ್ಕಾಗಿ ಬೇಕಾಗುವ ಹಣವೆಷ್ಟು?*

ಈ) *ಮೇಲ್ದರ್ಜೆಗೆ ಏರಿಸುವ ಒಟ್ಟು ಕಿ.ಮೀ. ಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು)?*

ಶ್ರೀ ಜಿ.ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು):

ಅ) ಹೌದು.

ಆ) 10000 ಕಿ.ಮೀ. ಉದ್ದದ ಜಿಲ್ಲಾ ಪರಿಷತ್ತ್ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಈ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು.

ಇ) ಮೇಲ್ದರ್ಜೆಗೆ ಏರಿಸಿದ ರಸ್ತೆಗಳ ನಿರ್ವಹಣೆಗೆ ಪ್ರತಿ ವರ್ಷವೂ 13.32 ಕೋಟಿ ರೂ.ಗಳು ಬೇಕಾಗುತ್ತದೆ. ಹಾಗೂ 10000 ಕಿ.ಮೀ. ಮೇಲ್ದರ್ಜೆಗೆ ಏರಿಸಿದ ರಸ್ತೆಗಳ ಅಭಿವೃದ್ಧಿಗೆ ಪ್ರತಿ ವರ್ಷಕ್ಕೆ 15 ಕೋಟಿ ರೂ.ಗಳಂತೆ ಮುಂದಿನ ಹತ್ತು ವರ್ಷಗಳಲ್ಲಿ ಒಟ್ಟು 150 ಕೋಟಿ ರೂ.ಗಳು ಬೇಕಾಗುತ್ತದೆ.

ಈ) ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮೀ. ಉದ್ದದ ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು.

ಕೆಲವು ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವುದು.

285-ಶ್ರೀ ಬಸವರಾಜರಾಯ ರೆಡ್ಡಿ (ಯಲಬುರ್ಗಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆಲವು ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನು ಪರಿವರ್ತಿಸುವು ಬಗ್ಗೆ ಸರ್ಕಾರವು ಪ್ರಸ್ತಾಪಿಸಿದೆಯೇ?*

ಆ) *ಹಾಗಿದ್ದಲ್ಲಿ, ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ರಾಜ್ಯ ಹೆದ್ದಾರಿಗಳು ಯಾವುವು?*

ಇ) *ರಾಜ್ಯ ಸರ್ಕಾರವು ಕಳುಹಿಸಿರುವ ಪ್ರಸ್ತಾವನೆಗಳ ಪೈಕಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರವು ಒಪ್ಪಿರುವ ರಾಜ್ಯ ಹೆದ್ದಾರಿಗಳು ಯಾವುವು?*

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ(ಲೋಕೋಪಯೋಗಿ ಸಚಿವರು):

ಅ) ಹೌದು.

ಆ) ಪಟ್ಟಿ ಲಗತ್ತಿಸಿದೆ.

ಇ) ಯಾವುವು ಇಲ್ಲ.